ಸಹಸ್ರಮಾನದ ಶಾಸನ ಎಂದು ತಿಳಿದಾಗಲೇ ನನಗೆ ಎಲ್ಲಿಲ್ಲದ ಸಂಭ್ರಮ; ಅಂದರೆ ಆದಿಕವಿ ಪಂಪ ಹುಟ್ಟುವುದಕ್ಕೂ ಮೊದಲೇ ನಿಲ್ಲಿಸಿದ ವೀರಗಲ್ಲು! 1150 ವರ್ಷಗಳಿಗೂ ಹಳೆಯದಾದ ಈ ಶಾಸನವನ್ನು ಈಗ ಹುಡುಕಿ ತೆಗೆಯಲು ಸಾಧ್ಯವಾದೀತೆ ಎಂಬ ಪ್ರಶ್ನೆ ಮೂಡಿತು. ಆದರೆ ಐಜೂರಿನಲ್ಲಿ ಶಾಸನ ಎಲ್ಲಿದೆ ಎಂಬ ವಿವರಗಳು ಸರ್ವೆ ರಿಪೋರ್ಟ್‌ನಲ್ಲಾಗಲೀ, ಗ್ಯಾಜೆಟಿಯರ್‌ನಲ್ಲಾಗಲೀ ಇರಲಿಲ್ಲ. ಎಪಿಗ್ರಾಫಿಯಾ ಹೊತ್ತಿಗೆಗಳನ್ನೇ ಮತ್ತಷ್ಟು ಪರಾಮರ್ಶಿಸಿದಾಗ, 'ಎಪಿಗ್ರಾಫಿಯಾ ಕರ್ನಾಟಿಕ' ಒಂಬತ್ತನೇ ಹೊತ್ತಿಗೆಯ 'ಸಪ್ಲಿಮೆಂಟ್' ಹೊತ್ತಿಗೆಯಲ್ಲಿ ಈ ಶಾಸನ 'ಕ್ಲೋಸ್‌ಪೇಟೆ ಹೋಬಳಿ ಐಜಾರಲ್ಲಿ ಶಿವಾಚಾರ ರುದ್ರಯ್ಯನ ಪಾಳು ನಿವೇಶನದಲ್ಲಿ ನಟ್ಟಕಲ್ಲು' ಎಂದು ಬರೆದಿರುವುದು ಕಂಡುಬಂದಿತು.

ಬೆಟ್ಟದ ತಪ್ಪಲಿನಲ್ಲಿ ಐದು ಮನೆಗಳಿದ್ದ ಗ್ರಾಮ ಇಂದು ಅತಿವೇಗದಲ್ಲಿ ಬೆಳೆದು ನಿಂತಿರುವ ರಾಮನಗರದ ಭಾಗವಾಗಿರುವಾಗ, ಆ ನಿವೇಶನ ಖಾಲಿಯಾಗಿ ಉಳಿದಿರಲು ಸಾಧ್ಯವೆ, ಮತ್ತೆ ಕಾಡಿದ ಪ್ರಶ್ನೆ. ಗುಡಿ, ಮಠಗಳ ಒಳಗೆ ಹಾಗೂ ಬೆಟ್ಟಗುಡ್ಡಗಳ ಮೇಲೆ ಇರುವ ಶಾಸನಗಳು ಉಳಿಯುವ ಸಂಭವನೀಯತೆ ಹೆಚ್ಚಿರುತ್ತದೆ. ಇದು ರುದ್ರಯ್ಯ ಎಂಬುವವರ ಪಾಳು ನಿವೇಶನದಲ್ಲಿ ಕಂಡ ಕಲ್ಲು; ಹೆದ್ದಾರಿ ಇಲ್ಲಿ ಊರ ನಡುವೆ ಹಾದು ಹೋಗಿರುವಾಗ 'ಒಂದೂಕಾಲು ಶತಮಾನದ ಹಿಂದೆ ಎಪಿಗ್ರಾಫಿಯಾ ತಂಡ ಕಂಡಿರುವ ಶಾಸನ ಇನ್ನೂ ಉಳಿದಿರುತ್ತದೆಯೆ?' ಎಂಬ ಅನುಮಾನ ಪುಟಿದೆದ್ದರೂ, ಐಜೂರಿಗೆ ಮತ್ತೆ ಹೊರಟೆ.

ಮತ್ತೆ ಗಲ್ಲಿಗಲ್ಲಿಗಳಲ್ಲಿ ಅಲೆಯುತ್ತಾ ಸ್ಥಳೀಯರನ್ನು ವಿಚಾರಿಸಿದೆ; ಅದೇ 'ಗೊತ್ತಿಲ್ಲ' ಎಂಬ ಉತ್ತರ. 1900ಕ್ಕೂ ಮೊದಲೇ ಇಲ್ಲಿ ಬಂದು ನೆಲೆಸಿದ ಕುಟುಂಬಗಳ ಬಗ್ಗೆ ವಿಚಾರಿಸಿದೆ. ಮಲ್ಲೇಶ್ವರ ದೇವಸ್ಥಾನದ ಬೀದಿಯ ಅಂಗಡಿಯೊಂದರಲ್ಲಿ ಸುಳಿವು ಸಿಕ್ಕಿತು, ಖಾಲಿ ನಿವೇಶನದಲ್ಲಿ ಹಿಂದೆಂದೋ ಒಂದು ಕಲ್ಲು ಕಂಡಿದ್ದರು. ಈಗ ಅಲ್ಲಿ ಹೋಗಿ ನೋಡಿದರೆ, ಕಟ್ಟಡ ಕಟ್ಟುವ ಕೆಲಸ ಭರದಿಂದ ಸಾಗಿತ್ತು. ಅಲ್ಲೇ ಹುಡುಕಾಡಿದೆ, ನಿವೇಶನದಲ್ಲಿ ಕಟ್ಟಡದ ಸಾಮಗ್ರಿಗಳ ನಡುವೆ ನೆಲದಲ್ಲಿ ಬಹಳಷ್ಟು ಹುಗಿದುಹೋಗಿದ್ದ ಆ ಶಾಸನದ ಕಲ್ಲನ್ನು ಗುರುತಿಸಿದೆ. ಎಪಿಗ್ರಾಫಿಯಾದಲ್ಲಿ ಅದರ ಎತ್ತರವನ್ನು 3 ಅಡಿ 9 ಅಂಗುಲ ಎಂದು ನಮೂದಿಸಿತ್ತು. ಈಗ ನನಗೆ ನೆಲದ ಮೇಲೆ ಕಾಣುತ್ತಿದ್ದದ್ದು 2 ಅಡಿ 6 ಅಂಗುಲ ಮಾತ್ರ. ಆದರೆ ಕಲ್ಲು ಎಪಿಗ್ರಾಫಿಯಾದಲ್ಲಿ ನಮೂದಿಸಿದಂತೆ 4 ಅಡಿ ಅಗಲವಿತ್ತು.

ಅಲ್ಲೇ ಬಿದ್ದ ಕಡ್ಡಿಯಿಂದ ಮಣ್ಣುಮೆತ್ತಿದ ಕಲ್ಲಿನ ಹೊರಮೈಯನ್ನು ಸ್ವಚ್ಛ ಮಾಡಿದೆ. ಅದೋ, 1909–10ರ 'ಮೈಸೂರು ಆರ್ಕಿಯಾಲಜಿಕಲ್ ಸರ್ವೆ ರಿಪೋರ್ಟ್'ನಲ್ಲಿ ವಿವರಿಸಿರುವಂತೆ ವೀರನೊಬ್ಬನು ಎಡಗೈಯಲ್ಲಿ ಬಿಲ್ಲನ್ನೂ, ಬಲಗೈಯಲ್ಲಿ ಕತ್ತಿಯನ್ನು ಹಿಡಿದ ಸ್ಪಷ್ಟ ಚಿತ್ರ ಕಂಡಿತು. ಚಿತ್ರದ ಮೇಲೆ ಮಬ್ಬಾಗಿ ಕನ್ನಡದ ಅಕ್ಷರಗಳ ಶಾಸನದ ಕೆತ್ತನೆ ಕಾಣಿಸಿತು.



ಬಂಡೆಯ ಕೊರಕಲಿನಲ್ಲಿ ಹರಡಿ ಬಿದ್ದಿರುವ ಸುಂದರ ಕೆತ್ತನೆಯ ವೀರಗಲ್ಲುಗಳು

ಈ ಶಾಸನ 'ಶ್ರೀ' ಅಕ್ಷರದಿಂದ ಆರಂಭವಾಗಿತ್ತು, ಹಳೆಯ ಶಾಸನಗಳ ಆ ಅಕ್ಷರ ನನಗೆ ಈಗ ಕೊಂಚ ಪರಿಚಯವಿದ್ದ ಕಾರಣ, ಒಂದಿಷ್ಟು ನೀರು ಸುರಿದು ತೊಳೆದಾಗ, ಅದು ಮತ್ತಷ್ಟು ಸ್ಪಷ್ಟವಾಯಿತು.

ಶ್ರೀನೀತಿಮಾರ್ಗ್ಗಪೆರ್ಮಾನಡಿಗಳ್‌ಸಗ್ಗಮೇರಿದನ್ನು ಎಂದು ನೀತಿಮಾರ್ಗ ಸ್ವರ್ಗಕ್ಕೇರಿದ ಸ್ಮರಣಾರ್ಥವಾಗಿ ಮಾದವಯ್ಯನ ಮಗ ನಾಗಯ್ಯ ಕೆರೆಯೊಂದನ್ನು ಕಟ್ಟಿಸಿದ್ದನ್ನು ಈ ಶಾಸನ ತಿಳಿಸುತ್ತದೆ. ಯುದ್ಧರಂಗದಲ್ಲಿ ಬದುಕೆಲ್ಲವನ್ನೂ ಕಳೆದ ವೀರ ನೀತಿಮಾರ್ಗನನ್ನು ಒಂದು ಕೈಯಲ್ಲಿ ಬಿಲ್ಲು ಇನ್ನೊಂದು ಕೈಯಲ್ಲಿ ಕತ್ತಿ ಹಿಡಿದಂತೆ ಚಿತ್ರಿಸಲಾಗಿದೆ. ಆತನ ಟೊಂಕದ ಬಳಿ ಬತ್ತಳಿಕೆಯಂತೆ ಕಾಣುವ ವಸ್ತು ನೇತಾಡುತ್ತಿದೆ. ಎಪಿಗ್ರಾಫಿಯಾ ದಾಖಲಿಸಿರುವ ಕ್ರಿ.ಶ. 869ರ ನೀತಿಮಾರ್ಗನ ಮರಣದ ತದನಂತರ ನೆಟ್ಟ ವೀರಗಲ್ಲು ಇದೇ ಎಂದು ಸ್ಪಷ್ಟವಾಯಿತು.

ಈ ಶಾಸನದ ವಿಶೇಷವೆಂದರೆ, ಇದು ಗಂಗ ರಾಜವಂಶಕ್ಕೆ ಸೇರಿದ ದೊರೆ ನೀತಿಮಾರ್ಗ ಎರೆಗಂಗನನ್ನು ಕುರಿತಾಗಿರುವುದು. ನೂರೆಂಟು ಯುದ್ಧಗಳಲ್ಲಿ ಕಾದಾಡಿದ ಈ ದೊರೆ, ಯುದ್ಧಗಳ ನಿರರ್ಥಕತೆಯನ್ನು ಮನಗಂಡು ನೊಂದಿದ್ದ. ಈ ನೆಲದಲ್ಲಿ ಒಂದಿಷ್ಟು ಶಾಂತಿ ನೆಲಸಲಿ ಎಂಬ ಪ್ರಯತ್ನವಾಗಿ, ತನ್ನ ಮಗನನ್ನು ರಾಷ್ಟ್ರಕೂಟರ ಸಾಮ್ರಾಟ ಅಮೋಘವರ್ಷನ ಮಗಳಿಗೆ ಮದುವೆ ಮಾಡಿಕೊಟ್ಟಿದ್ದ. ಆದರೂ ಕದನಗಳಿಗೆ ಕೊನೆ ಇರಲಿಲ್ಲ. ಜೈನ ಮತಕ್ಕೆ ಸೇರಿದ ಈ ದೊರೆ ನೀತಿಮಾರ್ಗ, ಸಲ್ಲೇಖನ ವ್ರತವನ್ನು ತೆಗೆದುಕೊಂಡು ದೇಹತ್ಯಾಗ ಮಾಡಿದ.



ಕ್ರಿ.ಶ. 869ರ ಅಪೂರ್ವವಾದ 'ವೀರಗಲ್ಲು ಶಾಸನ' ತನ್ನ ಈ ಮೂಲಸ್ಥಾನದಲ್ಲಿ ಒಂದು ಸಾವಿರ ವರ್ಷಕ್ಕೂ ಮೀರಿ ನಿಂತಿತ್ತು. ಇದು ಗಂಗ ರಾಜವಂಶದ ದೊರೆ ನೀತಿಮಾರ್ಗ ಸ್ವರ್ಗಕ್ಕೇರಿದ ಸ್ಮರಣಾರ್ಥವಾಗಿ ನೆಟ್ಟ ವೀರಗಲ್ಲು

ಟಿ. ನರಸೀಪುರದಲ್ಲಿ ಇರುವ ಶಾಸನದಲ್ಲಿ ಸಲ್ಲೇಖನ ವ್ರತ ಪಾಲಿಸುತ್ತಿರುವ ನೀತಿಮಾರ್ಗನ ಕೆತ್ತನೆಯಿದೆ, ಅದರ ರೇಖಾಚಿತ್ರವನ್ನು 1894ರಲ್ಲಿ ಪ್ರಕಟವಾದ ಎಪಿಗ್ರಾಫಿಯಾ ಮೂರನೇ ಹೊತ್ತಿಗೆ ನೀಡಿತ್ತು. ಆದರೆ ಇಲ್ಲಿ ಈಗ ನಾನು ಕಾಣುತ್ತಿರುವ ನೀತಿಮಾರ್ಗನ ಉಲ್ಲೇಖವಿರುವ ಶಾಸನದ ಚಿತ್ರ ಎಲ್ಲಿಯೂ ಇರಲಿಲ್ಲ. ಸಾವಿರ ವರ್ಷಗಳಲ್ಲಿ ಮೊದಲ ಬಾರಿಗೆ ಈ ವಿಶೇಷ 'ವೀರಗಲ್ಲು ಶಾಸನ'ದ ಫೋಟೊ ನಾನು ತೆಗೆದಿರುವೆ ಎಂದು ಹೊಳೆದಾಗ ಖುಷಿಯಾಗಿ, ಮತ್ತಷ್ಟು ಫೋಟೊ ತೆಗೆದುಕೊಂಡು ಹಿಂತಿರುಗಿ ಬಂದಿದ್ದೆ.

ನೀತಿಮಾರ್ಗನ ಮಗ ಎರಡನೇ ರಾಜಮಲ್ಲ ಕ್ರಿ.ಶ. 869–70ರಲ್ಲಿ ಸಿಂಹಾಸನವೇರಿದ ಕಾರಣ, ನೀತಿಮಾರ್ಗ 869ರಲ್ಲಿ ಮರಣಿಸಿದ ಎಂದು 1909–10ರ ಆರ್ಕಿಯಾಲಜಿಕಲ್ ಸರ್ವೆ ರಿಪೋರ್ಟ್ ಊಹಿಸಿತ್ತು. ಕಳಿಂಗ ಯುದ್ಧದ ನಂತರ ಸಾಮ್ರಾಟ ಅಶೋಕ, ಬೌದ್ಧ ಧರ್ಮ ಸ್ವೀಕರಿಸಿದ ಕಥೆ ಶಾಲೆಯಲ್ಲಿಯೇ ಓದಿ ಬೆಳೆದಿದ್ದೆ. ಆದರೆ ಇಲ್ಲೊಬ್ಬ ರಾಜ ನೂರೊಂದು ಕದನದ ನಂತರ, ನೊಂದು ತನ್ನ ಪ್ರಾಣವನ್ನೇ ಬಿಟ್ಟ ಕಥೆ ತಿಳಿದೇ ಇರಲಿಲ್ಲ. 'ಶ್ರೀನೀತಿಮಾರ್ಗ'ನ ಹೆಸರಿರುವ ಈ ವೀರಗಲ್ಲು ಚಾರಿತ್ರಿಕ ಮಹತ್ವದ್ದು ಎಂದು ಅರಿವಾಯಿತು. ಕಟ್ಟಡ ಕಟ್ಟುತ್ತಿರುವ ಆ ಜಾಗದಲ್ಲಿ ಅದು ಸುರಕ್ಷಿತವಾಗಿ ಉಳಿಯುವುದೇ ಎಂಬ ಆತಂಕ ಮೂಡಿತು. 1905ರ ಎಪಿಗ್ರಾಫಿಯಾ ಪ್ರಕಾರ, ರಾಮನಗರ ತಾಲ್ಲೂಕಿನಲ್ಲಿಯೇ ಅತ್ಯಂತ ಪುರಾತನ ಶಾಸನ ಇದು. ಅಲ್ಲಿ ಕಟ್ಟಡ ಕಟ್ಟಿಸುತ್ತಿರುವ ನಿವೇಶನದ ಮಾಲೀಕರನ್ನು ಭೇಟಿ ಮಾಡಿ, ಈ ಶಾಸನದ ಮಹತ್ವವನ್ನು ತಿಳಿಸಿ, ಈ ಶಾಸನಕ್ಕೆ ಹಾನಿಯಾಗದಂತೆ ನೋಡಿಕೊಳ್ಳಲು ವಿನಂತಿಸಿಕೊಳ್ಳಬೇಕೆಂದು ಮೂರನೇ ಬಾರಿ ಐಜೂರಿಗೆ ಹೊರಟೆ.

ಅದೇ ಬೀದಿಯಲ್ಲಿ ನಡೆದು ನಿವೇಶನದ ಜಾಗಕ್ಕೆ ಬರುತ್ತೇನೆ, ಸಾವಿರ ವರ್ಷಕ್ಕೂ ಮೀರಿ ಅಲ್ಲೇ ತನ್ನ ಮೂಲಸ್ಥಾನದಲ್ಲಿದ್ದ ಶಾಸನ ಕಾಣೆಯಾಗಿತ್ತು! ವಿಚಾರಿಸಿದಾಗ ಅದನ್ನು ಎಬ್ಬಿಸಿ ಬೆಟ್ಟದ ಬುಡಕ್ಕೆ ಸಾಗಿಸಿದ್ದರು. ಈಗ ಬೆಟ್ಟದ ಬುಡಕ್ಕೆ ಹೋಗಿ ಹುಡುಕಿದಾಗ, ಅಲ್ಲಿ ಅಂಗಾತವಾಗಿ ಮಲಗಿತ್ತು ವೀರನ ಶಾಸನ. ಅದರ ಎತ್ತರವನ್ನು ಅಳತೆ ಮಾಡಿದೆ, ಏಳು ಅಡಿ ಇತ್ತು! ನೀರು ಸುರಿದು ತೊಳೆದು, ಕರವಸ್ತ್ರದಲ್ಲಿ ಒರೆಸಿದಂತೆ ಅಕ್ಷರಗಳು ಒಂದಿಷ್ಟು ಸ್ಪಷ್ಟವಾದವು. ವೀರನ ಬಲಕ್ಕೆ ಕೆಳಭಾಗದಲ್ಲಿದ್ದ ನಾಲ್ಕು ಕುದುರೆಗಳು ಎದ್ದು ಕಂಡವು. ಬಹಳಷ್ಟು ಫೋಟೊ ತೆಗೆದುಕೊಂಡೆ.

ಐಜೂರಿನ 14ನೇ ಶತಮಾನದ ಶಾಸನ ಮಾರಮ್ಮನ ಗುಡಿಯಲ್ಲಿ ಸುರಕ್ಷಿತವಿದೆ. ಈ ಅಮೂಲ್ಯವಾದ, 1154 ವರ್ಷಗಳಷ್ಟು ಪುರಾತನವಾದ, ಐತಿಹಾಸಿಕ ಮಹತ್ವವಿರುವ 9ನೇ ಶತಮಾನದ ಶಾಸನ ನಮ್ಮ ಮುಂದಿನ ತಲೆಮಾರುಗಳಿಗೆ ಉಳಿಯುವಂತಾಗಲಿ ಎಂದು ಆಶಿಸುತ್ತಾ ಬಸ್ ನಿಲ್ದಾಣದೆಡೆಗೆ ಹೆಜ್ಜೆ ಹಾಕಿದೆ.

(ಇಂಗ್ಲಿಷ್‌ನಿಂದ ಕನ್ನಡಕ್ಕೆ: ನೇಮಿಚಂದ್ರ)

ಪ್ರತಿಕ್ರಿಯಿಸಿ: feedback@sudha.co.in